-3-

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 397
ಸದಸ್ಯರ ಹೆಸರು : ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 17.07.2019.
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕೃಷಿ ಜಮೀನುಗಳಲ್ಲಿ ಅನಧಿಕೃತವಾಗಿ ಯಾವುದೇ ಭೂ ಪರಿವರ್ತನೆಯಾಗದೆ ಎಷ್ಟು ಬಡಾವಣೆಗಳು/ ನಿವೇಶನಗಳನ್ನು ರಚಿಸಲಾಗಿದೆ; (ತಾಲ್ಲೂಕುವಾರು, ಹೋಬಳಿವಾರು, ಗ್ರಾಮವಾರು ಮಾಹಿತಿ ನೀಡುವುದು) | ಬೆಂಗಳೂರು ನಗರ ಜಿಲ್ಲೆಯಲ್ಲಿನ 05 ತಾಲ್ಲೂಕುಗಳ ವ್ಯಾಪ್ತಿಯಲ್ಲಿ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ಉದ್ದೇಶಗಳಿಗೆ ಅಂದರೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95ರನ್ವಯ ಭೂ ಪರಿವರ್ತನೆ ಆದೇಶ ಪಡೆಯದೇ ಅನಧಿಕೃತವಾಗಿ ನಿರ್ಮಿಸಿರುವ ಬಡಾವಣೆಗಳ ವಿವರ ಈ ಕೆಳಗಿನಂತಿದೆ:- (ಕೆಳಗಿನ ಪಟ್ಟಿ ನೋಡಿ) ತಾಲ್ಲೂಕುವಾರು, ಹೋಬಳಿವಾರು, ಗ್ರಾಮವಾರು ಮಾಹಿತಿಯನ್ನು ಸಿಡಿ ರೂಪದಲ್ಲಿ ಸಲ್ಲಿಸಿದೆ. |
| ಆ) | ಅನಧಿಕೃತ ಬಡಾವಣೆ ಇದ್ದಲ್ಲಿ, ಕಂದಾಯ ಇಲಾಖೆ ಇಲ್ಲಿಯವರೆಗೂ ಅನಧಿಕೃತ ಬಡಾವಣೆಗಳ ಮೇಲೆ ಭೂ ಪರಿವರ್ತನೆ ಇಲ್ಲದೆ ಇರತಕ್ಕಂತ ಕೃಷಿ ಜಮೀನುಗಳ ಮೇಲೆ ನಿರ್ಮಾಣವಾಗಿರುವ ಹಳೆಯ ಮತ್ತು ಹೊಸ ಬಡಾವಣೆಗಳ ಮೇಲೆ ಕಾನೂನಿನಡಿಯಲ್ಲಿ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ನಅಇ 248 ಬೆಂಆದೇ 2016, ದಿನಾಂಕ:13/07/2016ರಲ್ಲಿ ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತ ನಿರ್ಮಾಣವಾಗುತ್ತಿರುವ ಅನಧಿಕೃತ ಬಡಾವಣೆಗಳನ್ನು ತಡೆಯುವ ಸಲುವಾಗಿ ಮಾರ್ಗಸೂಚಿಗಳನ್ನು ರೂಪಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ 15 ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ.<br><br>ಮುಂದುವರೆದು, ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 96(2)ರಡಿ ಕ್ರಮವಹಿಸಲಾಗುತ್ತಿದೆ. |

| ಕ್ರ.ಸಂ. | ತಾಲ್ಲೂಕು | ಸಂಖ್ಯೆ | ವಿಸ್ತೀರ್ಣ |
|---|---|---|---|
| 1. | ಬೆಂಗಳೂರು ಉತ್ತರ | 960 | 1760–07 |
| 2. | ಬೆಂಗಳೂರು. ದಕ್ಷಿಣ | 588 | 1267–39 |
| 3. | ಬೆಂಗಳೂರು ಪೂರ್ವ | 233 | 354–00 |
| 4. | ಯಲಹಂಕ | 432 | 1004–17 |
| 5. | ಆನೇಕಲ್ | 302 | 411–18 |
| | **ಒಟ್ಟು** | **2515** | **4798–01** |

**ಸಂಖ್ಯೆ: ಆರ್‌ಡಿ 12 ಎಲ್‌ಜಿಕ್ಯೂ 2019**

(ಆರ್.ವಿ.ದೇಶಪಾಂಡೆ)
**ಕಂದಾಯ ಸಚಿವರು**